

## ಟೈಗರ್ ಮತ್ತು ವು ಷು

ಸಮರಕಲೆಯ ಹೊಸ ವಿದ್ಯಮಾನಗಳನ್ನು ಅಭ್ಯಾಸ ಮಾಡುವುದು ಟೈಗರ್ ಶ್ರಾಫ್ ಅಚ್ಚುಮೆಚ್ಚಿನ ಹವ್ಯಾಸವೇ ಆಗಿದೆ. ಟೈಗರ್ ಶ್ರಾಫ್ ನಟಿಸಿದ ‘ಮುನ್ನಾ ಮೈಕೆಲ್’ ಚಿತ್ರದ ಬಿಡುಗಡೆ ಜುಲೈಗೆ ಮುಂದಕ್ಕೆ ಹೋಗಿದೆ. ಈ ಮಧ್ಯೆ ಹಿಂದಿನ ಯಶಸ್ವಿ ಚಿತ್ರ ‘ಬಾಗಿ’ಯ ಎರಡನೇ ಭಾಗ ‘ಬಾಗಿ 2’ ಚಿತ್ರೀಕರಣಕ್ಕೆ ಸಿದ್ಧತೆ ನಡೆದಿದೆ. ಸಾಜಿದ್ ನಾಡಿಯದ್‌ವಾಲಾ ನಿರ್ಮಾಣದ ಈ ಚಿತ್ರಕ್ಕೆ ಉದ್ದಕೂದಲು ಬಿಟ್ಟುಕೊಂಡು ಅರ್ಧ ಸಿನಿಮಾದಲ್ಲಿ ನಟಿಸಿದರೆ, ಉಳಿದರ್ಧ ಗಿಡ್ಡ ಕೂದಲಂತೆ. ಆದರೆ ಈ ಹೊಸ ಚಿತ್ರದಲ್ಲಿ ಸಮರಕಲೆಯ ಹೊಸ ಆಯಾಮಗಳನ್ನು ಪ್ರದರ್ಶಿಸಲು ಟೈಗರ್ ನಿರ್ಧರಿಸಿದ್ದಾನೆ. ಅದಕ್ಕೆಂದೇ ಹಾಂಕಾಂಗ್‌ನಲ್ಲಿ ಆ್ಯಕ್ಷನ್ ಡೈರೆಕ್ಟರ್ ಟೋನಿ ಚಿಂಗ್ ಜತೆ ಒಂದು ತಿಂಗಳ ವು ಷು ತರಬೇತಿಗೆಂದು ಟೈಗರ್ ಸೆಪ್ಟೆಂಬರ್‌ನಲ್ಲಿ ಹಾಂಕಾಂಗ್‌ಗೆ ಹಾರಲಿದ್ದಾನೆ. ಗೋವಾ, ಲಡಾಖ್, ಚೀನಾಗಳಲ್ಲಿ ಈ ಚಿತ್ರದ ಶೂಟಿಂಗ್ ನಡೆಯಲಿದೆಯಂತೆ.

ಟೈಗರ್‌ಗೆ ಈ ವರ್ಷ ಬಿಡುವಿಲ್ಲದ ವರ್ಷವಾಗುವ ಸೂಚನೆಗಳಿವೆ. ಬಾಲಿವುಡ್‌ನ ಯಶಸ್ವಿ ಚಿತ್ರ ‘ಸ್ಟೂಡೆಂಟ್ ಆಫ್ ದಿ ಇಯರ್’ನ ಭಾಗ–2 ಶೀಘ್ರವೇ ಚಿತ್ರೀಕರಣ ಆರಂಭಿಸಲಿದೆ. ಅದರ ಬೆನ್ನಲ್ಲೆ ‘ರ‍್ಯಾಂಬೊ’ ಚಿತ್ರದ ರಿಮೇಕ್ ನಲ್ಲಿ ಅಭಿನಯಿಸಲಿದ್ದಾನೆ. ಈ ಮಧ್ಯೆ ಮುಂಬೈಯ ಬಾಂದ್ರಾದಲ್ಲಿ ಆತನ ಮಿಶ್ರ ಸಮರಕಲೆಯ ಸ್ಟುಡಿಯೋ ಆರಂಭವಾಗಿದೆ. ಎಳೆಯರಿಗೆ ಇಲ್ಲಿ ಮಿಶ್ರ ಸಮರಕಲೆಗಳ ತರಬೇತಿ ನಡೆಯಲಿದೆ. ಈ ತರಬೇತಿ ಶಾಲೆಯ ಶಾಖೆಗಳನ್ನು ದೇಶಾದ್ಯಂತ ತೆರೆಯುವ ಉದ್ದೇಶವಿದೆ ಎಂದೂ ಟೈಗರ್ ಹೇಳಿದ್ದಾನೆ. ಜಾಕಿ ಶ್ರಾಫ್‌ನ ಮಗನ ನಟನೆಯ ಬಗ್ಗೆ ಹೇಳಿಕೊಳ್ಳುವಂತಹದ್ದು ಅಷ್ಟೇನೂ ಇಲ್ಲವಾದರೂ ನೈಜ ಆ್ಯಕ್ಷನ್ ಬಯಸುವ ಯುವಜನರಿಗೆ ಟೈಗರ್ ಚಿತ್ರಗಳು ಭರಪೂರ ಮನರಂಜನೆ ನೀಡುವುದಂತೂ ನಿಜ.

## ಮರಳಿದ ಸ್ಪೈಡರ್‌ಮ್ಯಾನ್

ಹಾಲಿವುಡ್‌ನ ಜನಪ್ರಿಯ ಪಾತ್ರ ಸ್ಪೈಡರ್‌ಮ್ಯಾನ್ ಮತ್ತೆ ಮರಳಿದ್ದಾನೆ. ಜುಲೈ ಮೊದಲ ವಾರದಲ್ಲಿ ಥಿಯೇಟರ್‌ಗೆ ಬರಲಿರುವ ‘ಸ್ಪೈಡರ್‌ಮ್ಯಾನ್ ಹೋಮ್‌ಕಮಿಂಗ್’ ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲೂ ತ್ರೀ–ಡಿ ಯಲ್ಲಿ ಅಭಿಮಾನಿಗಳನ್ನು ರಂಜಿಸಲಿದ್ದಾನೆ.

ಹಿಂದಿನ ಸ್ಪೈಡರ್‌ಮ್ಯಾನ್ ಪಾತ್ರಗಳಲ್ಲಿ ಟಾಬಿ ಮೇಗುರ್ ಮತ್ತು ಆ್ಯಂಡ್ರೂ ಗ್ಯಾರ್‌ಫೀಲ್ಡ್ ನಟಿಸಿದ್ದರೆ, ಈ ಸಲ ಟಾಮ್ ಹಾಲಂಡ್ ಹೊಸ ಹೀರೊ. ಜೈವಿಕವಾಗಿ ಮಾರ್ಪಾಟಾದ ಜೇಡವೊಂದು 15ರ ಹರೆಯದ ಬಾಲಕನಿಗೆ ಕಚ್ಚಿದ ಬಳಿಕ ಆ ಬಾಲಕನಿಗೂ ಜೇಡನ ಗುಣಗಳೆಲ್ಲ ಬರುತ್ತವೆ. ಅಲ್ಲಿಂದ ನಗರವನ್ನು ದುಷ್ಟರಿಂದ ರಕ್ಷಿಸುವ ಬಾಲಕನ ಸಾಹಸ ಶುರು. ಫ್ಯಾಂಟಸಿ ಬಯಸುವ ಪ್ರೇಕ್ಷಕರಿಗೆ ಸ್ಪೈಡರ್‌ಮ್ಯಾನ್ ಸದಾ ಹೊಸತೇ. ಈ ಹೊಸ ಸಿನಿಮಾವನ್ನು ಜಾರ್ಜಿಯಾ, ನ್ಯೂಯಾರ್ಕ್ ಮತ್ತು ಬರ್ಲಿನ್‌ನ ಸುಂದರ ಹೊರಾಂಗಣಗಳಲ್ಲಿ ಚಿತ್ರೀಕರಿಸಲಾಗಿದೆ.

■ ಬಿಂದು

